# ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.

**ಸಿ.ಸಿ.ನಂ: 380/2020**

ಫಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಕಿಕ್ಕೇರಿ ಪೊಲೀಸ್ ಠಾಣೆ

-ವಿರುದ್ಧ –

ಆರೋಪಿತರು :-

1. ನಂಜುಂಡೇಗೌಡ ಬಿನ್ ಲೇಟ್ ರಂಗಪ್ಪ, 52 ವರ್ಷ, ವ್ಯವಸಾಯ,
2. ಶಶಿಕಲ ಕೋಂ ನಂಜುಂಡೇಗೌಡ, 46 ವರ್ಷ, ಗೃಹಿಣಿ
3. ಮೋಹನ್ ಕುಮಾರ್ ಬಿನ್ ಲೇಟ್ ಬೀರಲಿಂಗೇಗೌಡ, 51 ವರ್ಷ
4. ದೇವರಾಜು ಬಿನ್ ಲೇಟ್ ಬೀರಲಿಂಗೇಗೌಡ, 44 ವರ್ಷ
   1 ರಿಂದ 4 ರವರ ವಾಸಃ ಕಡಹೆಮ್ಮಿಗೆ ಗ್ರಾಮ,
   ಕೆ.ಆರ್.ಪೇಟೆ ತಾಲ್ಲೂಕು.
5. ಶಾಲಿನಿ ಬಿನ್ ರಾಘವೇಂದ್ರ, 27 ವರ್ಷ
   ವಾಸಃ ಜನತ ಕಾಲೂನಿ, ಕೆ.ಆರ್. ಸಾಗರ,
   ಶ್ರೀರಂಗಪಟ್ಟಣ ತಾಲ್ಲೂಕು.
6. ಶಿಲ್ಪ ಬಿನ್ ನಾಗರಾಜು, 26 ವರ್ಷ
   ವಾಸಃ ಆದಿಹಳ್ಳಿ ಗ್ರಾಮ, ಎಸ್.ಬಿ.ಹಳ್ಳಿ ಹೋಬಳಿ,
   ಕೆ.ಆರ್.ಪೇಟೆ ತಾಲ್ಲೂಕು.

## -:: ದೋಷಾರೋಪಣೆ ::-

ಶ್ರೀ ಶಮೀರ್ ಪಿ. ನಂದ್ಯಾಲ್, ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೃಷ್ಣರಾಜಪೇಟೆ ಆದ ನಾನು ಮೇಲೆ ಹೇಳಿದ ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸಿರುತ್ತೇನೆ.

ದಿನಾಂಕ 24-05-2020 ರಂದು ಮದ್ಯಾಹ್ನ 11-40 ಗಂಟೆ ಸಮಯದಲ್ಲಿ ಕಿಕ್ಕೇರಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಡಹೆಮ್ಮಿಗೆ ಗ್ರಾಮದಲ್ಲಿ ಚಾಸಾ.01/ಶಂಕರ್ ಮತ್ತು 1 ನೇ ಆರೋಪಿಯ ರವರಿಗೆ ವಿವಾದವಿರುವ ಜಮೀನಿನ ಪಕ್ಕದಲ್ಲಿರುವ ಕರಾಬು ರಸ್ತೆಯಲ್ಲಿ ಆರೋಪಿತರುಗಳಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ಚಾಸಾ.01/ಶಂಕರ್ ರವರ ಮೇಲೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಗಲಾಟೆ ಮಾಡುವ ಉದ್ದೇಶವನ್ನಿಟ್ಟುಕೊಂಡು 3 ನೇ ಆರೋಪಿಯು ಚಾಸಾ.01 ರವರಿಗೆ ಈ ಜಮೀನು ನನ್ನ ಭಾವ ನಂಜುಂಡೇಗೌಡ ರವರ ಹೆಸರಿನಲ್ಲಿ ಇರುತ್ತೆ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಭಾ.ದಂ.ಸಂ ಕಲಂ 504 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

2. ಎರಡನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ನಿಮ್ಮಲ್ಲಿ 3 ನೇ ಆರೋಪಿಯು ಕಲ್ಲಿನಿಂದ ಚಾಸಾ.01/ಶಂಕರ್ ರವರ ಸೊಂಟಕ್ಕೆ ಹೊಡೆದು ನೋವುಂಟು ಮಾಡಿ, ಭಾ.ದಂ.ಸಂ ಕಲಂ 324 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

3. ಮೂರನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ನಿಮ್ಮಲ್ಲಿ 5 ಮತ್ತು 6 ನೇ ಆರೋಪಿತರುಗಳು ಕೈಯಿಂದ ಚಾಸಾ.02/ಮಣಿ ರವರ ಮೈ ಮೇಲೆ ಹೊಡೆದು ನೋವುಂಟು ಮಾಡಿ, ಎಲ್ಲಾ ಆರೋಪಿತರುಗಳು ಚಾಸಾ.03/ದಿಲೀಪ್ ರವರನ್ನು ಕೆಳಕ್ಕೆ ಕೆಡವಿಕೊಂಡು ಅವರ ಕಾಲುಗಳಿಂದ ಚಾಸಾ.03 ರವರಿಗೆ ತುಳಿದು ನೋವುಂಟು ಮಾಡಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ಭಾ.ದಂ.ಸಂ ಕಲಂ 323 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

4. ನಾಲ್ಕನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ನಿಮಲ್ಲಿ 1 ನೇ ಆರೋಪಿಯು ಉಳಿದ ಆರೋಪಿತರುಗಳಿಗೆ ಇವರನ್ನು ಹಾರೆಯಿಂದ ಹೊಡೆದು ಸಾಯಿಸಿ ಎಂದು ಗಲಾಟೆಗೆ ಪ್ರಚೋದನೆ ನೀಡಿ, ಭಾ.ದಂ.ಸಂ ಕಲಂ 114 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

5. ಐದನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ಎಲ್ಲಾ ಆರೋಪಿತರುಗಳು ಚಾಸಾ.01 ರಿಂದ ಚಾಸಾ.03 (ಶಂಕರ್, ಮಣಿ ಮತ್ತು ದಿಲೀಪ್) ರವರುಗಳಿಗೆ ಜಮೀನಿನ ವಿಚಾರಕ್ಕೆ ಬಂದರೆ ನಿಮ್ಮಗಳಿಗೆ ಒಂದು ಗತಿ ಕಾಣಿಸದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿ ಗಲಾಟೆ ಮಾಡಿ, ಪ್ರಾಣಭಯವನ್ನುಂಟು ಮಾಡಿ ಭಾ.ದಂ.ಸಂ ಕಲಂ 506 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

ಮೇಲೆ ಹೇಳಿದ ಅಪರಾಧಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1: ಮೇಲೆ ಹೇಳಿದ ಅಂಶಗಳು ನಿಮಗೆ ಅರ್ಥವಾಗಿದೆಯೇ ?

ಉ:

ಪ್ರ-2: ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ ?

ಉ:

ಮೇಲ್ಕಂಡ ವಿಷಯವನ್ನು ಆರೋಪಿತನಿಗೆ ಓದಿ ಹೇಳಿ ಸರಿಯೆಂದು ಒಪ್ಪಿದ್ದು ಅದರಂತೆ ಹೇಳಿಕೆ ಮಾಡಿಕೊಂಡಿದ್ದೇನೆ.

ದಿ: 21-01-2023
ಕೆ.ಆರ್.ಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕೆ.ಆರ್.ಪೇಟೆ